ಮಾಡಿದ್ದಾರೆ. ಆ ಬೀಜ ಸಪ್ಲೈ ಮಾಡಿದವರನ್ನು ಕೂಡ ಕರೆದು ಚರ್ಚೆ ಮಾಡಿದ್ದಾರೆ. ಆದರೆ ಇನ್ನೂ ಕೂಡ ಆ ರೈತರಿಗೆ ಪರಿಹಾರ ಕೊಟ್ಟಿಲ್ಲವೆನ್ನುವ ವಿಚಾರವನ್ನು ಅವರು ಪ್ರಸ್ತಾಪ ಮಾಡಿದ್ದಾರೆ. ಅದಕ್ಕೆ ಸಂಬಂಧಪಟ್ಟ ಕೃಷಿ ಸಚಿವರಾದ ಶ್ರೀ ಶ್ರೀನಿವಾಸಗೌಡರಿಗೆ ನಾನು ಅದನ್ನು ಹೇಳಿ ಮತ್ತೆ ಅದಕ್ಕೆ ಸಭೆ ಮಾಡಿಸಿ ಸಂಬಂಧಪಟ್ಟಂಥ ಆ ಭಾಗದ, ಮತ್ತೆ ಇಲ್ಲಿ ಹರಪನಹಳ್ಳಿ ಶಾಸಕರು ಕೂಡ ಇದೇ ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ಸಜ್ಜನ್‌ರವರು ಪ್ರಸ್ತಾಪ ಮಾಡಿ ಧಾರವಾಡ ಸೇರಿದಂತೆ ಬೇರೆ ಬೇರೆ ಭಾಗಗಳಲ್ಲಿ ಆಗಿದೆ ಎನ್ನುವ ಮಾತನ್ನು ಸಹ ಹೇಳಿದ್ದಾರೆ. ಅದರ ಬಗ್ಗೆ ಒಂದು ತೀರ್ಮಾನ ಮಾಡಿ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ಅವರಿಗೆ ನಾನು ಸೂಚಿಸುತ್ತೇನೆ. ಅದರಂತೆ ಅವರು ಕ್ರಮ ತೆಗೆದುಕೊಳ್ಳತಕ್ಕಂಥ ಪ್ರಯತ್ನವನ್ನು ಮಾಡಲಾಗುವುದು.

ವಿಷಯ : ರಾಜ್ಯದಲ್ಲಿರುವ ಗ್ರಾಮ ಪಂಚಾಯಿತಿಗಳಿಗೆ ಆಗುತ್ತಿರುವ ತೊಂದರೆಗಳ ಬಗ್ಗೆ.

ಶ್ರೀ ಕೆ. ರಘುಪತಿ ಭಟ್ (ಉಡುಪಿ) : ಮಾನ್ಯ ಅಧ್ಯಕ್ಷರೆ, ನಾನು ಇವತ್ತು ಪ್ರಸ್ತಾಪ ಮಾಡಲಿಕ್ಕೆ ಹೊರಟಿರುವಂಥದ್ದು ಏನೆಂದರೆ, ಇಡೀ ರಾಜ್ಯದ ಗ್ರಾಮ ಪಂಚಾಯತ್‌ಗಳಿಗೆ ಆಗುತ್ತಿರುವಂಥ ತೊಂದರೆಗಳ ಬಗ್ಗೆ ಪ್ರಸ್ತಾಪ ಮಾಡುತ್ತಿದ್ದೇನೆ. ಪ್ರಾಯಶಃ ನಮ್ಮ ಮಾನ್ಯ ಗ್ರಾಮೀಣಾಭಿವೃದ್ಧಿ ಸಚಿವರು, ಮಾನ್ಯ ಅರ್ಥ ಸಚಿವರು ಮತ್ತು ಮಾನ್ಯ ಇಂಧನ ಸಚಿವರು ಇದಕ್ಕೆ ಸ್ಪಂದಿಸಬೇಕಾಗುತ್ತದೆ. ಇವತ್ತು ದಾರಿದೀಪಗಳನ್ನು ಅಳವಡಿಸಬೇಕಾದರೆ ಹಿಂದೆ ಗ್ರಾಮಪಂಚಾಯತ್‌ಗಳಲ್ಲಿ ಇದ್ದದ್ದು ಶೇಕಡ 10 ಅನ್ನು supervision charge ಆಗಿ MESCOM ಅಥವಾ ಯಾವುದಾದರೂ ESCOM ಕಂಪನಿಗಳಿಗೆ ಕಟ್ಟಿ ಉಳಿದ ಎಲ್ಲ ಕಾಮಗಾರಿಗಳನ್ನು ವಿದ್ಯುತ್ ಇಲಾಖೆಯವರೇ ಮಾಡಿಕೊಡುವಂಥ ಕಾನೂನು ಇತ್ತು. ಆದರೆ 16.12.2004ರಲ್ಲಿ ರಾಜ್ಯಸರ್ಕಾರ ಒಂದು ಹೊಸ ಆದೇಶವನ್ನು ಹೊರಡಿಸಿದೆ. ಆ ಆದೇಶದಲ್ಲಿ ಏನಿದೆಯೆಂದರೆ – ಇನ್ನು ಮುಂದೆ ಗ್ರಾಮಪಂಚಾಯತ್‌ಗಳಿಗೆ ದಾರಿದೀಪಗಳನ್ನು ಅಳವಡಿಸಬೇಕಾದರೆ 10% supervision charge ಅನ್ನು ಗ್ರಾಮಪಂಚಾಯತ್‌ನವರೇ ಕಟ್ಟಬೇಕು. ಅದರ ನಂತರ ಪೂರ್ತಿ 100% ಕಾಮಗಾರಿಗಳನ್ನು ಗ್ರಾಮಪಂಚಾಯತಿಯವರ ವತಿಯಿಂದಲೇ ನಡೆಸಿಕೊಂಡು ಹೋಗಬೇಕೆನ್ನುವಂಥ ಹೊಸ ಆದೇಶವನ್ನು ಸರ್ಕಾರ ಮಾಡಿದೆ. ಇವತ್ತು water supply ಯ LT ಗೂ ಅದೇ ಕಾನೂನನ್ನು ಅಳವಡಿಸಿದ್ದಾರೆ. ಅದೇ ರಾಜ್ಯಪತ್ರದಲ್ಲಿ

ಅದನ್ನು ಪ್ರಕಟಿಸಿದ್ದಾರೆ. ನಾನು ಇವತ್ತು ಸರ್ಕಾರದ ಗಮನಕ್ಕೆ ಸೆಳೆಯುವುದೇನೆಂದರೆ, ಇದೇ ಕಾನೂನು ಮೊದಲು ನಗರಾಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಿಗೆ ಬರುವಂಥ ಗ್ರಾಮಪಂಚಾಯತಿಗಳಿಗೆ ಇತ್ತು. ಆ ಸಂದರ್ಭದಲ್ಲಿ ನನ್ನ ಕ್ಷೇತ್ರದಲ್ಲಿ 7 ಪಂಚಾಯತಿಗಳಲ್ಲಿ ಒಂದೇ ಒಂದು ಕಡೆ ಕೂಡ ದಾರಿದೀಪಗಳನ್ನು ಅಳವಡಿಸಲಿಕ್ಕೆ ಆಗಲಿಲ್ಲ. ಅದ್ದರಿಂದ ಗ್ರಾಮಪಂಚಾಯತಿಗಳೇ ಇವತ್ತು ಶೇಕಡ 10ನ್ನು ಕಟ್ಟಿ ಪುನಃ ಪೂರ್ತಿ ಕಾಮಗಾರಿಗಳನ್ನು ಗ್ರಾಮಪಂಚಾಯತಿಗಳೇ ಮಾಡಬೇಕೆನ್ನುವಂಥ ಹೊಸ ಕಾನೂನನ್ನು ಮಾಡಿದ್ದರಿಂದ ಖಂಡಿತವಾಗಿ ಒಂದೇ ಒಂದು ಗ್ರಾಮಪಂಚಾಯತ್ ಒಂದೇ ಒಂದು ದಾರಿದೀಪವನ್ನು ಕೂಡ ಹಾಕುವಂಥ ವ್ಯವಸ್ಥೆಯನ್ನು ಮಾಡುವುದಕ್ಕೆ ಸಾಧ್ಯವಿಲ್ಲ. ಏಕೆಂದರೆ ಈಗಾಗಲೇ ನಮಗೆ ಗೊತ್ತಿದ್ದ ಹಾಗೆ ಸ್ವಂತವಾದ ಸಂಪನ್ಮೂಲಗಳು ಗ್ರಾಮಪಂಚಾಯತಿಗಳಲ್ಲಿ ಇಲ್ಲ. ರಾಜ್ಯಸರ್ಕಾರದಿಂದ ಅನುದಾನಗಳು ಬಿಡುಗಡೆಯಾಗುವಂಥದ್ದು ಯಾವುದಕ್ಕೂ ಸಾಕಾಗುವುದಿಲ್ಲ. ಮೂಲಭೂತ ಸೌಕರ್ಯಗಳಲ್ಲಿ ಬಹಳ ಮುಖ್ಯವಾದದ್ದು ದಾರಿದೀಪಗಳ ವ್ಯವಸ್ಥೆ ಮಾಡುವಂಥದ್ದು. ಗ್ರಾಮಪಂಚಾಯತಿಗಳಲ್ಲಿ ಇವತ್ತು ಹೊಸದಾಗಿ ಆಯ್ಕೆಯಾಗಿ ಬಂದವರು ಇದ್ದಾರೆ. ಕೆಲವು ಕಡೆ ದಾರಿದೀಪಗಳನ್ನು ಹಾಕುತ್ತೇವೆಂದು ಭರವಸೆಗಳನ್ನು ಕೊಟ್ಟು ಬಂದಿರುತ್ತಾರೆ. ಖಂಡಿತವಾಗಿ ಈ ಕಾನೂನು ಮುಂದುವರಿಯುತ್ತದೆಯೆಂದಾದರೆ ಯಾರೇ ಒಬ್ಬ ಗ್ರಾಮ ಪಂಚಾಯತಿ ಸದಸ್ಯರಿಗೆ ಒಂದೇ ಒಂದು street light ಅನ್ನು ಹಾಕಿಸುವುದಕ್ಕೆ ಆಗುವುದಿಲ್ಲ, ಏಕೆಂದರೆ, ಒಂದು ಕಡೆ street light ಹಾಕಬೇಕೆಂದು ಕಂಬ ಹಾಕಿ ಲೈನ್ ಎಳೆದು ವೈರ್ ಹಾಕಬೇಕೆಂದರೆ ಕನಿಷ್ಟ ಒಂದರಿಂದ ಎರಡು ಲಕ್ಷ ರೂಪಾಯಿಗಳ ಖರ್ಚಾಗುತ್ತದೆ. ಅದಕ್ಕೆ 10 ಸಾವಿರ ಕಟ್ಟಿ ಮತ್ತೆ ಪುನಃ ರೂ 1 ಲಕ್ಷವನ್ನು ಗ್ರಾಮ ಪಂಚಾಯತಿಯೇ ಕೊಟ್ಟು ಮಾಡಿಸಬೇಕೆನ್ನುವಂಥ ಕಾನೂನನ್ನು ರಾಜ್ಯಸರ್ಕಾರ ಡಿಸೆಂಬರ್ 2004ರಲ್ಲಿ ಹೊರಡಿಸಿದ್ದರಿಂದ ಯಾವುದೇ ದಾರಿದೀಪಗಳನ್ನು ಹಾಕಿಸಲಿಕ್ಕೆ ಆಗುವುದಿಲ್ಲ. ದಯವಿಟ್ಟು ಮಾನ್ಯ ಹಣಕಾಸು ಸಚಿವರು, ಗ್ರಾಮೀಣಾಭಿವೃದ್ಧಿ ಸಚಿವರಿದ್ದಾರೆ, ಇಂಧನ ಸಚಿವರು ಕುಳಿತುಕೊಂಡು ದಯವಿಟ್ಟು ಈ ಕಾನೂನಿಗೆ ಬದಲಾವಣೆ ತರಬೇಕು. ಇಲ್ಲವೆಂದರೆ ಮುಂದೆ ಗ್ರಾಮಪಂಚಾಯತಿಗಳಿಗೆ ನಾನು ಹೋಗಲಿಕ್ಕೆ ಆಗದಿದ್ದಂಥ, ಜನರನ್ನು ಎದುರಿಸಲಿಕ್ಕೆ ಆಗದಿರುವಂಥ ಪರಿಸ್ಥಿತಿ ಆಗುತ್ತದೆ. ಈ ಹೊಸ ಕಾನೂನನ್ನು ಬದಲಾವಣೆ ಮಾಡಬೇಕೆಂದು ವಿನಂತಿಯನ್ನು ನಾವು ಮಾಡಿಕೊಳ್ಳುತ್ತಿದ್ದೇವೆ.

ಶ್ರೀ ಸಿದ್ಧರಾಮಯ್ಯ (ಉಪ ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, ಇವತ್ತು ಮಾನ್ಯ ಇಂಧನ ಸಚಿವರು ಬಂದಿಲ್ಲ. ಮಾನ್ಯ ಸದಸ್ಯರು ಕೆಲವು ನಿಬಂಧನೆಗಳು ಬದಲಾವಣೆಯಾಗಬೇಕೆಂದು ಏನು ಪ್ರಸ್ತಾಪ ಮಾಡಿದ್ದಾರೆ, ಅದನ್ನು ಅವರ ಜೊತೆ ಚರ್ಚೆ ಮಾಡಿ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಬಿ.ಎಸ್. ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, ಈಗ ಇಲ್ಲಿ ಮಾನ್ಯ ಗ್ರಾಮೀಣಾಭಿವೃದ್ಧಿ ಸಚಿವರು ಮತ್ತು ತಾವು ಹಣಕಾಸು ಸಚಿವರಿದ್ದೀರಿ. ಇಂಧನ ಸಚಿವರನ್ನು ನಾವು ಎಲ್ಲಿ ಹುಡುಕಿಕೊಂಡು ಹೋಗಬೇಕೋ ಗೊತ್ತಿಲ್ಲ. ಅವರು ಖುಷಿ ಬಂದಾಗ ಬಿಡುವು ಆದಾಗ ಬರಲಿ. ನಮ್ಮದೇನೂ ಅಭ್ಯಂತರವಿಲ್ಲ. ಇಲ್ಲಿ ಎರಡು ಪ್ರಶ್ನೆ ಇದೆ. ಮೊದಲು mini water supply ಗೆ ರೂ. 50 ಸಾವಿರ ಇತ್ತು. Pipe water supply ಗೆ ರೂ. 1 ಲಕ್ಷ ಇತ್ತು. ಇತ್ತೀಚೆಗೆ ಸುತ್ತೋಲೆ ಹೊರಡಿಸಿದರು. ಇನ್ನು ಮುಂದೆ ಅವರೇನು ಎಸ್ಟಿಮೇಟ್ ಮಾಡುತ್ತಾರೋ, ಆ ಖರ್ಚು ಪೂರ್ತಿಯಾಗಿ ಕುಡಿಯುವ ನೀರಿನದಕ್ಕೆ ವಿದ್ಯುತ್ ಕನೆಕ್ಷನ್ ಕೊಡಬೇಕಾದರೆ ದುಡ್ಡನ್ನು ಅವರೇ ಕಟ್ಟಬೇಕು. ಅಂದರೆ, 25 ಸಾವಿರ mini water supply ಗೆ ಖರ್ಚಾದರೆ, ಅವರು ಎಸ್ಟಿಮೇಟ್ ಮಾಡಿರುವಂತಹ 1 ಲಕ್ಷ ರೂಪಾಯಿಗಳನ್ನು ಕೊಟ್ಟು, ಮೂಗಿಗಿಂತ ಮೂಗುತಿಯೇ ಭಾರ ಎಂಬ ರೀತಿಯಲ್ಲಿ ಆದೊಂದು ಆದೇಶ ಹೊರಡಿಸಲಾಗಿದೆ. ಈಗ ನಮಗೆ ಆಘಾತ ತರುವಂತಾದ್ದು, ಅವರು ಹೇಳುತ್ತಿರುವಂತಾದ್ದು ಏನೆಂದರೆ, ನಿಮಗೆ street light ಬೇಕೆಂದರೆ, 10% supervision charge ನೀವು ಹಜಾಮತಿ ಮಾಡಿ, ಪೂರ್ತಿ ಖರ್ಚು ನೀವೇ ಮಾಡಿಕೊಳ್ಳಿ. ಅಂದರೆ ಇನ್ನು ಮುಂದೆ ನೀವು ಗ್ರಾಮ ಪಂಚಾಯಿತಿಗೆ ವರ್ಷಕ್ಕೆ 25 ಲಕ್ಷ ರೂಪಾಯಿಗಳನ್ನು ಕೊಟ್ಟರೂ ಸಹ, ಒಂದು ರೀತಿ ಅಧಿಕಾರ ವಿಕೇಂದ್ರೀಕರಣ ಎಂದು ಅವರಿಗೆ ವಹಿಸಿಕೊಟ್ಟು, ಅವರಿಗೆಲ್ಲರಿಗೂ ಸಹ ಈ ರೀತಿ ಕಿರುಕುಳ ಕೊಟ್ಟು, ಬೇಡಪ್ಪೋ ಈ ಗ್ರಾಮ ಪಂಚಾಯಿತಿ ಸದಸ್ಯತ್ವದ ಸ್ಥಾನ ಅಥವಾ ತಾಲ್ಲೂಕು ಪಂಚಾಯಿತಿ ಸದಸ್ಯತ್ವದ ಸ್ಥಾನ ಎಂದು ಹೇಳುವಂತಹ ಉಸಿರು ಕಟ್ಟುವಂತಹ ಸ್ಥಿತಿಗೆ ಈ KPTCL ಅಧಿಕಾರಿಗಳು ನಡೆದುಕೊಳ್ಳುತ್ತಿದ್ದಾರೆ. ಅವರಿಗೆ ಹೇಳುವವರು ಕೇಳುವವರು ಯಾರು ಇಲ್ಲ. ಅವರು ದಿನಾ ಒಂದೊಂದು ಕಾನೂನು ಮಾಡುತ್ತಾರೆ. ಉಪ ಮುಖ್ಯಮಂತ್ರಿಗಳಾದ ತಾವೇ ಕ್ಯಾಬಿನೆಟ್‌ನಲ್ಲಿ ಕುಳಿತು, ಗ್ರಾಮೀಣಾಭಿವೃದ್ಧಿ ಸಚಿವರು, ಮುಖ್ಯಮಂತ್ರಿಗಳು ಮತ್ತು ತಾವು ಮಾತನಾಡಿ, ಇದಕ್ಕೇನಾದರೂ ಒಂದು ಪರಿಹಾರವನ್ನು

ಹುಡುಕಿ. ಇಲ್ಲದಿದ್ದರೆ ನಾವ್ಯಾರೂ ಸಹ ಗ್ರಾಮಾಂತರ ಪ್ರದೇಶಗಳಿಗೆ ಹೋಗುವುದಕ್ಕಾಗುವುದಿಲ್ಲ. ಈಗಾಗಲೇ ಗ್ರಾಮಾಂತರ ಪ್ರದೇಶಗಳಲ್ಲಿ ಯಾವ ತರಹದ ಸ್ಥಿತಿ ಇದೆ ಎಂಬುದು ನಿಮಗೆ ಗೊತ್ತು. ಹರಿಜನ ಕಾಲೋನಿ, ತಾಂಡಗಳಿಗೆ ಹೋದರೆ ಒಂದು ಲೈನ್‌ನಲ್ಲಿ ಕರೆಂಟ್ ಇರುತ್ತದೆ, ಇನ್ನೊಂದು extensionನಲ್ಲಿ ಲೈಟ್ ಇರುವುದಿಲ್ಲ. ಅಲ್ಲಿಗೆ ಲೈನ್ ಎಳೆಯಬೇಕು ಎಂದರೆ ನೀವು ಗ್ರಾಮ ಪಂಚಾಯಿತಿಗೆ ಹಣ ಕೊಡಬೇಕೇ ವಿನಃ ಬೇರೆ ಕಡೆ ಅಲ್ಲ, ಅವರ ಹತ್ತಿರ ಎಲ್ಲಿ ದುಡ್ಡು ಇದೆ ಸ್ವಾಮಿ ? ಇಡೀ ವರ್ಷ ಅವರ ಅಭಿವೃದ್ಧಿ ಕಾರ್ಯಕ್ಕೆ ನಾವು ಕೊಟ್ಟಿರುವುದು 80 ಸಾವಿರ ರೂಪಾಯಿಗಳು ಮಾತ್ರ. ಒಂದು ಸ್ಟ್ರೀಟ್ ಲೈನ್ ಹಾಕುವುದಕ್ಕೇ ಅವರಿಗೆ 80 ಸಾವಿರ ರೂಪಾಯಿಗಳು ಖರ್ಚಾಗುತ್ತವೆ. ಒಂದು ಕುಡಿಯುವ ನೀರಿನ ವ್ಯವಸ್ಥೆ ಮಾಡಬೇಕೆಂದರೇ ಅಷ್ಟು ಹಣ ಖರ್ಚಾಗುತ್ತದೆ. ಅಲ್ಲಿಗೆ ಈ ವ್ಯವಸ್ಥೆಯೇ ಬುಡಮೇಲಾಗುತ್ತದೆ, ಕುಸಿದು ಹೋಗುತ್ತದೆ. ಇದರ ಬಗ್ಗೆ ಕೇವಲ ನೀವು ಇಲ್ಲಿ ಉತ್ತರ ಕೊಡುವುದಕ್ಕಿಂತ ಹೆಚ್ಚಾಗಿ, ನೀವೆಲ್ಲರೂ ಸೇರಿ ಇದರ ಬಗ್ಗೆ ಗಂಭೀರವಾಗಿ ಪರಿಗಣಿಸಿ ಚರ್ಚೆ ಮಾಡಿ, ದಯಮಾಡಿ ಇದಕ್ಕೊಂದು ಪರಿಹಾರ ಕಂಡುಹಿಡಿಯಿರಿ. ಇಲ್ಲದಿದ್ದರೆ ಗ್ರಾಮೀಣಾಭಿವೃದ್ಧಿ ಸಚಿವರೇ, ನೀವು ಬೇರೆ ಇನ್ನೊಂದು ಇಲಾಖೆ ತೆಗೆದುಕೊಳ್ಳಿ. ನಿಮ್ಮ ಮರ್ಯಾದೆಯನ್ನೇ ತೆಗೆದು ಬಿಡುತ್ತಾರೆ. ನೀವು ಕೆಲಸವನ್ನೂ ಸಹ ಮಾಡುವುದಕ್ಕಾಗುವುದಿಲ್ಲ, ಇದು ಸಿದ್ದರಾಮಯ್ಯನವರ ಪ್ರಶ್ನೆಯಲ್ಲ KPTCL ಇಲಾಖೆಯಲ್ಲಿ ಈ ಇಪ್ಪತ್ತೈಂಟು ಮೆಸ್ಕಾಮ್, ಎಸ್ಕಾಮ್ ಮಾಡಿದ ಮೇಲೆ, ಅವುಗಳು ಏನು ಮಾಡುತ್ತಿವೆ ? Transformers ಸುಟ್ಟರೆ ಎರಡು ತಿಂಗಳಾದರೂ ಯಾರೂ ಕೂಡ ಪತ್ತೆಯಿಲ್ಲ. 10 ಪಂಪ್‌ಸೆಟ್ ಕನೆಕ್ಷನ್ಸ್ ಇದ್ದರೆ ಅನಧಿಕೃತ ಸೇರಿ ಅದು 20 ಆಗಿ ಹೋಗಿರುತ್ತದೆ. Un-authorised ಅನ್ನು ಸರ್ಕಾರ confirm ಮಾಡುತ್ತದೆ. ಅವರಿಗೆ ಕಂಬ ಇಲ್ಲ, ಲೈನ್ ಎಳೆಯಲ್ಲಿಲ್ಲ, ವೈರ್ ಕೊಡಲಿಲ್ಲ. ಸಾರ್, ಗ್ರಾಮೀಣ ಸ್ಥಿತಿಯನ್ನು ನೀವು ನೋಡಿ ಬಿಟ್ಟರೆ, ಖಂಡಿತವಾಗಿಯೂ, ಗ್ರಾಮ ಪಂಚಾಯಿತಿ ಚುನಾವಣೆಗಳಾಯಿತು, ಒಂದೂ ಗೋಲಿಬಾರ್ ಆಗಲಿಲ್ಲ, ಇಷ್ಟ ಜನ ಗೆದ್ದರು, ಇದು ಒಂದು ಮುಖ, ಇದರ ಇನ್ನೊಂದು ಮುಖವೇ ಬೇರೆ ಇದೆ. ದಯಮಾಡಿ ಇದರ ಬಗ್ಗೆ ಸೀರಿಯಸ್ಸಾಗಿ ತಾವೇನಾದರೂ ಕ್ರಮ ತೆಗೆದುಕೊಂಡರೆ ನಾವು ಉಸಿರಾಡಬಹುದು. ನಿಮ್ಮ ಮತ್ತು ನನ್ನ ಕ್ಷೇತ್ರಗಳೂ ಸೇರಿ ಇದು 224 ಜನ ಶಾಸಕರೂ ಇರತಕ್ಕಂಥ ಪರಿಸ್ಥಿತಿಯಾಗಿದೆ.

ಶ್ರೀ ಸಿದ್ದರಾಮಯ್ಯ : ಮಾನ್ಯ ಅಧ್ಯಕ್ಷರೇ, ಸನ್ಮಾನ್ಯ ಸದಸ್ಯರು ಮತ್ತು ಮಾನ್ಯ ಯಡಿಯೂರಪ್ಪನವರು ಹೇಳಿರತಕ್ಕಂಥ ಸಲಹೆ ಚೆನ್ನಾಗಿದೆ. ಹಳ್ಳಿಗಳಲ್ಲಿ ಬಹಳ ತೊಂದರೆಯಾಗುತ್ತಿದೆ, ಎಲ್ಲಾ ಬಹಳ ದುಬಾರಿಯಾಗುತ್ತಿದೆ ಎನ್ನತಕ್ಕಂಥ ಮಾತನ್ನು ಅವರು ಹೇಳಿದ್ದಾರೆ. ಅದರ ಬಗ್ಗೆ ಸಂಬಂಧಪಟ್ಟಂತಹ ಮಂತ್ರಿಗಳ ಜೊತೆಗೆ ನಾನು ಮಾತನಾಡುತ್ತೇನೆ. KPTCLನವರು ಯಾವ ಹಿನ್ನೆಲೆಯಲ್ಲಿ ಇದನ್ನೆಲ್ಲಾ ಮಾಡಿದ್ದಾರೆ ಎನ್ನತಕ್ಕಂಥದ್ದನ್ನು ನೋಡಿ, ಅವರ ಜೊತೆ ಚರ್ಚೆ ಮಾಡುತ್ತೇನೆ. ಇದಕ್ಕಾಗಿ ನಾನು ಬಜೆಟ್‌ನಲ್ಲಿ ಮಾತೊಂದನ್ನು ಹೇಳಿದ್ದೇನೆ. ಆಶ್ರಯ ಯೋಜನೆಯಲ್ಲಿ ಮನೆಗಳನ್ನು ಕೊಟ್ಟಿರತಕ್ಕಂಥ ಭಾಗದಲ್ಲೆಲ್ಲಾ ಲೈಟ್‌ಗಳಿಲ್ಲ. ಅದಕ್ಕಾಗಿ ಅಲ್ಲಿ ವಸೂಲಾದಂತಹ ಹಣವನ್ನು ನಿಮಗೇ ಕೊಡುತ್ತೇನೆ, ವಿದ್ಯುಚ್ಛಕ್ತಿಗೆ ಖರ್ಚಾಗತಕ್ಕಂಥದ್ದನ್ನೆಲ್ಲಾ ನೀವೇ ಮಾಡಿಕೊಳ್ಳಿ ಎಂದು ಬಜೆಟ್‌ನಲ್ಲಿ ಈ ಸಾರಿ ನಾನು ಹೇಳಿದ್ದೇನೆ. ನಾವು ಆಶ್ರಯ ಮನೆಗಳನ್ನು ಕಟ್ಟಿ ಕೊಟ್ಟಿದ್ದೇವೆ. ಅಲ್ಲಿ ರಸ್ತೆ ಮಾಡಿ ಕೊಟ್ಟಿಲ್ಲ, ವಿದ್ಯುತ್ ಕೊಟ್ಟಿಲ್ಲ, ಚರಂಡಿ ಮಾಡಿಕೊಟ್ಟಿಲ್ಲ, ಈ ತರಹದ್ದು ಎಲ್ಲಾ ಇವೆ. ಅದಕ್ಕೆ ಮೂಲಭೂತ ಸೌಲಭ್ಯಗಳನ್ನು ಒದಗಿಸಿಕೊಡಬೇಕೆಂಬ ದೃಷ್ಟಿಯಿಂದ, ಆಶ್ರಯ ಮನೆಯಿದ್ದರಲ್ಲಿ ಅವರದು ಸಾಲದ ರೂಪದಲ್ಲಿ ಇರುತ್ತದಲ್ಲಾ, ಆ ರೀತಿ ಸರ್ಕಾರಕ್ಕೆ ಕಟ್ಟಿರತಕ್ಕಂಥ ದುಡ್ಡಿನಲ್ಲಿ, ಸ್ವಲ್ಪ ಭಾಗವನ್ನು ನಾವು ಇವತ್ತು ಅವರಿಗೇ ಕೊಡುತ್ತೇವೆ. ಆ ರೀತಿ ಮಾಡಬೇಕೆಂದು ಈ ಬಾರಿಯ ಬಜೆಟ್‌ನಲ್ಲೂ ಸಹಿತ ನಾನು ಹೇಳಿದ್ದೇನೆ. ಇದರ ಬಗ್ಗೆ ನಾವು ಚರ್ಚೆ ಮಾಡಿ, ಒಂದು ಯೋಗ್ಯವಾದಂತಹ ತೀರ್ಮಾನಕ್ಕೆ ಬರುತ್ತೇವೆ.

ವಿಷಯ : ಶಿವಮೊಗ್ಗದ ವೀರಭದ್ರೇಶ್ವರ ಚಿತ್ರಮಂದಿರದ ಮಾಲೀಕರನ್ನು ವಿನಾಕಾರಣ ಬಂಧಿಸಿ ಕಿರುಕುಳ ನೀಡಿರುವ ಬಗ್ಗೆ.

ಶ್ರೀ ಕೆ.ಎಸ್. ಈಶ್ವರಪ್ಪ (ಶಿವಮೊಗ್ಗ) : ಮಾನ್ಯ ಅಧ್ಯಕ್ಷರೇ, ಮೊನ್ನೆ ಶುಕ್ರವಾರ ಶಿವಮೊಗ್ಗದಲ್ಲಿ ಒಬ್ಬ ಸಿನಿಮಾ ಥಿಯೇಟರ್‌ನ ಮಾಲೀಕರಾದ ಗೌರವಸ್ಥ ನಾಗರಿಕರನ್ನು ಪೊಲೀಸರು ಬಂಧಿಸಿದ್ದಾರೆ. ಅವರನ್ನು ಏತಕ್ಕಾಗಿ ಬಂಧನ ಮಾಡಿದ್ದಾರೆ ಎಂದು ಕೇಳಿದರೆ, ಒಂದು ಪೋಸ್ಟರ್ ಅನ್ನು ಹಚ್ಚಿದ್ದಾರೆ, ಅದು ಅಶ್ಲೀಲವಾಗಿದೆ ಎಂಬ ಕಾರಣದಿಂದ ಅವರನ್ನು ಬಂಧಿಸಲಾಗಿದೆ. ಆ ಪೋಸ್ಟರ್‌ಗಳನ್ನು ಹಚ್ಚಲು ಸೂಕ್ತವಾದುದು